ಬಿಟ್ಟುಕೊಟ್ಟಾಗಿತ್ತು, ಈಗ ಮತ್ತೆ ಪಡೆದುಕೊಳ್ಳುತ್ತಾ ಇದ್ದಾರೆ ಎಂಬ ಆಕ್ಷೇಪಣೆ ಏನಿದೆ ಇದನ್ನು ನಾನು ಅರ್ಥಮಾಡಿಕೊಳ್ಳಲಿಕ್ಕೆ ನನಗೆ ಬಹಳ ಕಷ್ಟವಾಗುತ್ತಾ ಇದೆ. ಇವತ್ತು ಸರ್ಕಾರ ಇರುವುದೇ ಅಧಿಕಾರದ ಒಂದು ಕೇಂದ್ರವಾಗಿ. ಅಧಿಕಾರ ಇಲ್ಲದೇ ಇರತಕ್ಕ ಸರ್ಕಾರವನ್ನು ಕಲ್ಪನೆ ಮಾಡಿಕೊಂಡರೆ, ಅಂಥಾದ್ದನ್ನು ಸ್ಥಾಪನೆ ಮಾಡಿದರೆ ಅಂತಹ ಸರ್ಕಾರದಿಂದ ಯಾವ ಪ್ರಯೋಜನವೂ ಆಗಲಿಕ್ಕೆ ಸಾಧ್ಯವಿಲ್ಲ. ಅಧಿಕಾರದ ದುರುಪಯೋಗವಾಗುತ್ತದೆ, ಆದ್ದರಿಂದ ಯಾವ ಅಧಿಕಾರವೂ ಕೂಡ ಮಂತ್ರಿಮಂಡಲದ ಮಟ್ಟದಲ್ಲಿ ಇರಕೂಡದು ಎಂಬ ಒಂದು ತರ್ಕಕ್ಕೆ ಇದು ಎಡೆ ಕೊಡುತ್ತದೆ. ಯಾವ ಅಧಿಕಾರವೂ ಇಲ್ಲದೇ ಇರತಕ್ಕ ಮಂತ್ರಿ ಆಗಲಿ, ಮಂತ್ರಿಮಂಡಲ ಆಗಲಿ ಏಕೆ ಇರಬೇಕೆಂದು ಪ್ರಶ್ನೆಮಾಡಲಿಕ್ಕೆ ಬಯಸುತ್ತೇನೆ. ಇವತ್ತು ಅಧಿಕಾರದ ದುರುಪಯೋಗವನ್ನು ನಾವು ಎತ್ತಿ ತೋರಿಸಿ, ಅದು ಆಗದ ರೀತಿಯಲ್ಲಿ ಅದಕ್ಕೆ ಏನು ಪ್ರತಿಬಂಧಕವನ್ನು ಮಾಡಬಹುದೋ ಆ ಬಗ್ಗೆ ಸಾಕಾದಷ್ಟು ಚರ್ಚೆ ಮಾಡಬಹುದು.

11-30 A.M.

ಅಧಿಕಾರ ದುರುಪಯೋಗವಾಗಬಾರದು ಎನ್ನುವ ಕಾರಣದಿಂದ ಕಾನೂನು ಇರಕೂಡದು ಎನ್ನುವ ವಾದ ಸರಿಯಾದುದಲ್ಲ. ಈ ಹೊತ್ತು ಸರ್ಕಾರದ ಆಡಳಿತದಲ್ಲಿ ಪ್ರತಿಯೊಂದೂ ರಾಜಕೀಯವಾಗುತ್ತದೆ ಎಂದು ಹೇಳಿದರೆ ಮಂತ್ರಿಮಂಡಲ ತಮ್ಮ ಅಧಿಕಾರವನ್ನು ಬಿಟ್ಟು ಬಿಡಬೇಕು, ಏನಾದರೂ ಡಿವಿಷನಲ್ ಕಮೀಷನರಿಗೋ ಅಥವಾ ಡೆಪ್ಯುಟಿ ಕಮೀಷನರಿಗೋ ಅವರ ತಲೆಮೇಲೆ ಈ ಕೆಲಸವನ್ನು ಹೊರಿಸಿದರೆ ಈಗ ಇರತಕ್ಕಂಥ ಅಧಿಕಾರದ ಹೊರೆಯ ಜೊತೆಗೆ ಇನ್ನೂ ಹೊರೆಯನ್ನು ಅವರಿಗೆ ಹೊರಸಿದ ಹಾಗೆ ಆಗುತ್ತದೆ. ರಾಜಕೀಯ ದೃಷ್ಟಿಯಿಂದ ಸಂಪೂರ್ಣ ಅಧಿಕಾರ ಮಂತ್ರಿಮಂಡಲಕ್ಕೆ ಇದೆ. ಈ ಪ್ರಜಾಪ್ರಭುತ್ವದಲ್ಲಿ ಕೆಲವೇ ಅಧಿಕಾರಿಗಳ ಕೈಯಲ್ಲಿ ಅಧಿಕಾರ ಇರಬೇಕು ಎಂದು ಹೇಳುವುದು ಸರಿಯಲ್ಲ. ಸರಕಾರಕ್ಕೆ ಅಧಿಕಾರವೇ ಬೇಡ, ಮಂತ್ರಿಗಳಿಗೆ ಅಧಿಕಾರವೇ ಬೇಡ ಈ ರೀತಿ ರಾಜಕೀಯ ಪಕ್ಷಗಳ ಭಿನ್ನಾಭಿಪ್ರಾಯದಿಂದ ಡೆಪ್ಯೂಟೀ ಕಮೀಷನರೇ ಇರಲಿ ಎನ್ನುವ ಮಾತು ಸರಿಯಲ್ಲ. ದುರುಪಯೋಗವಾದರೆ ಖಂಡಿಸೋಣ. ಅಧಿಕಾರ ದುರುಪಯೋಗ ಮಾಡುವ ಜನ ಇದ್ದರೆ ಅದರ ಬಗ್ಗೆ ತೀವ್ರಕ್ರಮ ಕೈಗೊಳ್ಳೋಣ.

Sri M. MALLIKARJUNASWAMY—Government and Administration are two different things.

ಶ್ರೀ ಅಜೀಜ್‌ಸೇಟ್.—ಇದನ್ನು ಪಾರ್ಟಿ ಮೀಟಿಂಗ್‌ನಲ್ಲಿ ತೀರ್ಮಾನ ಮಾಡಲಿಲ್ಲವೇ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೆ, ಈಗ ಕೆಲವುಮಟ್ಟಿಗೆ ಅಧಿಕಾರಶಾಹಿ ಇದೆ ಎಂದು ಮಾನ್ಯ ಸದಸ್ಯರು ಏನು ಹೇಳಲಿಕ್ಕೆ ತಯಾರಾಗಿದ್ದಾರೋ ಅದನ್ನು ನಾನು ಒಪ್ಪುತ್ತೇನೆ. ಅಂತಹ ಅಧಿಕಾರಿಶಾಹಿಗಳು ಒಬ್ಬರೋ, ಒಬ್ಬರೋ ಅಂತಹವರು ಇದ್ದರೆ ಅವರಿಗೆ ಏನು ಶಿಕ್ಷೆ ಕೊಡಬೇಕೋ ಕೊಡೋಣ. ಆದರೆ ಹೆಚ್ಚು ಅಧಿಕಾರವನ್ನು ಅವರಿಗೆ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ರಾಜಕೀಯದಲ್ಲಿ ಭಿನ್ನಾಭಿಪ್ರಾಯ ಇರುವ ಕಾರಣ ಮಾನ್ಯ ಸದಸ್ಯರು ಈ ರೀತಿ ಹೇಳಿದ್ದಾರೆ ಎಂದು ಭಾವಿಸುತ್ತೇನೆ. ಬಹುಶಃ ಈ ಸಭೆಯ ಗಮನವನ್ನು ಸೆಳೆಯುವುದಕ್ಕೆ ಈ ಪ್ರಶ್ನೆ ಎದ್ದಿದೆ ಎಂದು ಕಾಣುತ್ತದೆ. ಈಹೊತ್ತಿನ ದಿವಸ ಮಂತ್ರಿಮಂಡಲಕ್ಕೆ ಅಧಿಕಾರ ಇದ್ದರೆ ಅದು ದುರುಪಯೋಗವಾಗುತ್ತದೆ. ಆದುದರಿಂದ ಅದು ಇರಕೂಡದು ಎಂಬ ವಾದವನ್ನು ಬಿಟ್ಟು ನೀವು ಇದರಲ್ಲಿ ಸಾಕಷ್ಟು ವಿಚಾರ ಮಾಡಬೇಕು. ಮತ್ತು ಈರೀತಿ ನಾವು ವಾದವನ್ನು ಬೆಳೆಸಿದರೆ ಇದರ ತುದಿ ಎಲ್ಲಿಗೆ ಹೋಗುತ್ತದೆ ಎಂದು ವಿಚಾರ ಮಾಡಿದರೆ ಅದು ಕೇವಲ ಪ್ರಾಬ್ಲೆಮ್ಸ್‌ನಿಂದ ಕೂಡಿದ ಮಾತಾಗುತ್ತದೆ ಎಂದು ಹೇಳುತ್ತೇನೆ. ಇದನ್ನು ಹಾಗೆಯೇ ಬೆಳೆಸುವುದಕ್ಕೆ ಸಾಧ್ಯ ಇಲ್ಲ. ಇದಕ್ಕೆ ಸಂಬಂಧಪಟ್ಟ ರೂಲು ಬರುತ್ತದೆ. ಅದರಲ್ಲಿ ಸಾಕಷ್ಟು ಪ್ರತಿಬಂಧಕ ಇರುವುದು ಅನಿವಾರ್ಯ. ಅಂತಹ ಅಶ್ವಾಸನೆಯನ್ನು ಸಂಬಂಧಪಟ್ಟ ಮಂತ್ರಿಗಳು ಕೊಡುತ್ತಾರೆಂದು ನಾನು ಆಶಿಸಿ, ಈ ವಿಧೇಯಕವನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಈಗ ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತೇನೆ. ಈಗಾಗಲೇ ಅನೇಕ ಮಾನ್ಯಸದಸ್ಯರು ಹೇಳಿದ್ದಾರೆ. ಬಡಜನರ ಹಿತರಕ್ಷಣೆಗಾಗಿ ಈ ಕಾಯಿದೆ ತಂದಿಲ್ಲ ಎಂದು. ಆದರೆ ರಾಜಕೀಯ ದೃಷ್ಟಿಯಿಂದ ಆ ಪಕ್ಷದಲ್ಲಿರತಕ್ಕಂಥ ಜನರು ಈ ತರಹ ಅಕ್ರಮವಾಗಿ ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾರೆ, ಅಂತಹದನ್ನೆಲ್ಲಾ ರೆಗ್ಯುಲರೈಸ್ ಮಾಡಬೇಕು ಎನ್ನುವ ಉದ್ದೇಶದಿಂದ ಕಾಯಿದೆ ಇದೆಯೇ ಹೊರತು ಬಡಜನರಿಗೆ, ಹರಿಜನರಿಗೆ ಇನ್ನೂ ಇತರರಿಗೆ ಸಹಾಯ ಮಾಡಬೇಕು ಎನ್ನುವ

(ಶ್ರೀ ಎಂ. ನಾಗಪ್ಪ)

ಉದ್ದೇಶ ಈ ಕಾಯಿದೆಯಲ್ಲಿಲ್ಲ. ಇದರಲ್ಲಿ 94 (ಎ) ತಿದ್ದುಪಡಿ ನೋಡಿದರೆ ಡೆಪ್ಯೂಟಿ ಕಮೀಷನರಿಗೆ ಕೊಟ್ಟಿರತಕ್ಕಂಥ ಅಧಿಕಾರ ಸರ್ವಾಧಿಕಾರ. ಅವರು ಯಾರಿಗೆ ಬೇಕಾದರೂ ಜಮೀನು ಕೊಡಬಹುದು, ರೆಗ್ಯುಲರೈಸ್ ಮಾಡಬಹುದು, ಅದಕ್ಕೆ ಒಂದೇ ಒಂದು ನಿಯಮ ಹಾಕಿದ್ದಾರೆ. ಅದು ಏನೆಂದರೆ ಮಾರ್ಕೆಟ್ ವ್ಯಾಲ್ಯೂಗಿಂತ 2 ಪಟ್ಟು ಇರಬೇಕೆಂದು. ಇಂತಹ ಒಂದು ಅಧಿಕಾರವನ್ನು ಕೊಟ್ಟರೆ ಅವರು ರೆಗ್ಯುಲರೈಸ್ ಮಾಡತಕ್ಕಂಥ ಕಾಲದಲ್ಲಿ ಅವರು ಅಧಿಕಾರವನ್ನು ಸರಿಯಾಗಿ ಉಪಯೋಗಿಸದೆ ರಾಜಕೀಯ ದೃಷ್ಟಿಯಿಂದ ಉಪಯೋಗಿಸಿಕೊಳ್ಳಲಿಕ್ಕೆ ಅವಕಾಶವಾಗುತ್ತದೆ ಎಂದು ಈ ಕಲಂನಿಂದ ಸ್ಪಷ್ಟವಾಗುತ್ತದೆ. ಡೆಪ್ಯೂಟಿ ಕಮೀಷನರು ಲ್ಯಾಂಡ್ಸ್ ಕೊಡಬೇಕಾದರೆ ಲ್ಯಾಂಡ್ ಗ್ರಾಂಟ್ ರೂಲ್ಸ್ ಮಾಡಿದ್ದೀರಿ. ಆ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಯಾರಿಗೆ ಎಷ್ಟು ಕೊಡಬೇಕು ಎಂದು ತಾವು ನಿರ್ದಿಷ್ಟ ಮಾಡಿದ್ದೀರಿ. ಇಂತಹ ಪರಿಸ್ಥಿತಿಯಲ್ಲಿ ನೂರಾರು ಎಕರೆ ಜಮೀನು ಇರತಕ್ಕಂಥವರು ಸಹಿತ ಈ ಸೆಕ್ಷನ್ ಪ್ರಕಾರ ಇಲ್ಲೀಗಲ್ ಆಕ್ಯುಪೇಷನ್‌ನಲ್ಲಿ ಇದ್ದರೆ ಅದನ್ನು ಲೀಗಲೈಸ್ ಮಾಡಬಹುದು. ಆಮೇಲೆ ರಿಸಂಪ್ಷನ್ ಲ್ಯಾಂಡ್‌ನಲ್ಲಿ ಪುನಃ ಅದು ಹೆಚ್ಚಿಗೆ ಇದ್ದರೆ ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ ಪಕ್ಷದಲ್ಲಿ ಅವರಿಗೆ ಕಾಂಪೆನ್ಸೇಷನ್ ಹೇಗೆ ಕೊಡಬೇಕು ? ಈ ಕಾಂಪೆನ್ಸೇಷನ್ ಕೊಡಬೇಕಾದರೆ ನಮ್ಮ ದೇಶದ ಹಣದ ಬೊಕ್ಕಸದಿಂದ ನಾವು ಅವರಿಗೆ ಕಾಂಪನ್ಸೇಷನ್ ಕೊಡಬೇಕಾದ ಪರಿಸ್ಥಿತಿ ಬರುತ್ತದೆ. ಅದಕ್ಕಾಗಿ ಇಂತಹ ಒಂದು ತಿದ್ದುಪಡಿ ತಂದಿರುವುದನ್ನು ನಾನು ವಿರೋಧಿಸುತ್ತೇನೆ. ಇದರಲ್ಲಿ ಸ್ಪಷ್ಟವಾಗಿ ಹೇಳಿದೆ 94 (ಎ) ನಲ್ಲಿ ಯಾರಿಗೆ ಜಮೀನು ಇಲ್ಲ, ಯಾರು ನಿರ್ಗತಿಕರಾಗಿದ್ದಾರೆ ಅಥವಾ ಯಾರಿಗೆ ಮಿನಿಮಮ್ ಹೋಲ್ಡಿಂಗ್ ಇದೆ ಅಂತಹವರಿಗೆ ರೆಗ್ಯುಲರೈಸ್ ಮಾಡಬೇಕು, ಬಾಕಿಯವರಿಗೆ ಕೊಡುವುದನ್ನು ಒಂದು ನಿರ್ಬಂಧ ಮಾಡುವ ಶಾಸನ ಒಂದು ತಂದಿದ್ದರೆ ಅದನ್ನು ವಾಸ್ತವಿಕವಾಗಿ ಒಪ್ಪಬಹುದಾಗಿತ್ತು. ಇದರಲ್ಲಿ ಯಾವ ವಿಧವಾದ ನಿರ್ಬಂಧವೂ ಇಲ್ಲ. ಇಷ್ಟು ಜಮೀನು ಅವರಿಗೆ ರೆಗ್ಯುಲರೈಸ್ ಮಾಡಬೇಕು ಎಂದು ಇಲ್ಲ. ಅದಕ್ಕಾಗಿ ನಾನು ವಿರೋಧಿಸುತ್ತೇನೆ.

ಇನ್ನು ಕೆಲವು ತಿದ್ದುಪಡಿಗಳನ್ನು ಮಾನ್ಯ ಸಚಿವರು ಮಂಡಿಸಿದ್ದಾರೆ. ಅದು ರಾಜಕೀಯ ತಿದ್ದುಪಡಿ ಎಂದು ನಾನು ಭಾವಿಸುತ್ತೇನೆ. ಮಾನ್ಯ ಮಂತ್ರಿಗಳು ಆ ತಿದ್ದುಪಡಿ ಪ್ರಕಾರ 1 ಜುಲೈ 1968 ಎಂದು ಡೇಟ್ ಗೊತ್ತು ಮಾಡಿದ್ದಾರೆ. ಅದರ ಪ್ರಕಾರ ಆ ತಾರೀಕಿನ ಹಿಂದೆ ಜಮೀನು ಸಾಗುವಳಿ ಮಾಡುವವರಿಗೆ ಇದು ಅನ್ವಯಿಸುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ರಾಜ್ಯದ ಸಂಯುಕ್ತಸೋಷಲಿಸ್ಟ್ ಪಕ್ಷದವರು ಅನೇಕ ಜಿಲ್ಲೆಗಳಲ್ಲಿ ತಾವು 22 ವರ್ಷದವರೆಗೂ ಜಮೀನು ಹಂಚದೇ ಇರುವುದನ್ನು ಖಂಡಿಸಿ ಸರ್ಕಾರಿ ಜಮೀನು ಇದ್ದಂಥ ಕಡೆ ಅವರೇ ಹಂಚುವ ಕಾರ್ಯಕ್ರಮ ತೆಗೆದುಕೊಂಡು ಅನೇಕ ಸ್ಥಳಗಳಲ್ಲಿ ಸಾವಿರಾರು ಎಕರೆ ಜಮೀನುಗಳನ್ನು ನಿರ್ಗತಿಕರಿಗೆ ಬಡಜನರಿಗೆ, ಹರಿಜನರಿಗೆ ಹಂಚಲು ಸ್ವಾಧೀನಪಡಿಸಿಕೊಂಡಿದ್ದಾರೆ. ಈವೊತ್ತು ಸಾಗುವಳಿ ಚೀಟಿ ಕೆಲವರಿಗೆ ಕೊಟ್ಟಿದ್ದಾರೆ. ಅಂಥಹವರಿಗೆ ಒಂದು ನಿರ್ದಿಷ್ಟವಾಗಿ ರೆಗ್ಯುಲರೈಸ್ ಮಾಡುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇಲ್ಲಿ ನಾನು ತಮ್ಮನ್ನು ಕೇಳುತ್ತೇನೆ, ನೀವೇ ತಂದಿರುವ ಆರ್ಡಿನೆನ್ಸ್‌ನ ತಾರೀಖು ನೋಡಿದರೆ 1969 ನೇ ಅಕ್ಟೋಬರು ತಿಂಗಳು 23 ರಲ್ಲಿ ಜಾರಿಗೆ ತಂದಿದ್ದೀರಿ. ಇದರಲ್ಲಿ ಏನೇನು ಕಂಡಿಷನ್ಸ್ ಎಂದು ತಂದಿದ್ದೀರೋ ಅವೆಲ್ಲಾ ಈಗ ನಮ್ಮಲ್ಲಿ ಜಾರಿಯಲ್ಲಿವೆ. ಈಗ ಇದನ್ನು ಬದಲಾವಣೆ ಮಾಡಿ ಇಲ್ಲಿ ಈಗ ಕಾನೂನು ತಂದು ಪಾಸು ಮಾಡುವುದರಿಂದ ಆಗುವುದೇನು ? ಇದರ ಪರಿಣಾಮ ದೇಶದ ಮೇಲೆ ಏನಾಗುತ್ತದೆ ? ಆರ್ಡಿನೆನ್ಸ್ ಪ್ರಕಾರ ಕೊಟ್ಟ ಅಧಿಕಾರಗಳನ್ನು ಕಿತ್ತು, ಕಾಯಿದೆ ಮಾಡುವಾಗ ಇರುವ ಅಧಿಕಾರಗಳನ್ನು ಕಿತ್ತು ಹಾಕುತ್ತೀರಾ ಅಥವಾ ಜನರನ್ನು ಕೋರ್ಟಿಗೆ ಕಳುಹಿಸುತ್ತೀರಾ, ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡುವಾಗ ಸ್ಪಷ್ಟಪಡಿಸಬೇಕು ಎಂದು ನಾನು ಇಲ್ಲಿ ಅವರನ್ನು ಕೇಳುತ್ತೇನೆ. ಇಲ್ಲದಿದ್ದರೆ ಇಂತಹ ಆರ್ಡಿನೆನ್ಸ್ ಎಂದು ಮಾಡುವ ಪರಿಸ್ಥಿತಿ ಇರಲಿಲ್ಲ. ಇಂತಹ ಆರ್ಡಿನೆನ್ಸ್ ತರುವುದಕ್ಕೆ ಮುನ್ನ ಏನಾದರೂ ಅಂತಹ ತೊಂದರೆಗಳಿದ್ದವೇ ಇಲ್ಲವೇ ಎನ್ನುವುದನ್ನು ತಾವುಗಳು ಯೋಚನೆ ಮಾಡಬೇಕಾಗಿತ್ತು. ಈಗಾಗಲೇ ನಿಮ್ಮ ಆರ್ಡಿನೆನ್ಸ್ ಬಂದಿದೆ ಎಂದು ಇದರ ಪ್ರಕಾರ ಜನರಿಂದ ಜಮೀನನ್ನು ಕಿತ್ತುಕೊಂಡು ಅವರನ್ನು ಕಷ್ಟಪಡುವ ಸ್ಥಿತಿಗೆ ತಂದಿದ್ದಾರೆ. ಈಗ ಇಂತಹ ಒಂದು ತಿದ್ದುಪಡಿ ತಂದು ಇದರಂತೆ ಏನು ಸಾಧನೆ ಮಾಡಿದಂತಾಗುತ್ತೆ ? ಇಂತಹ ತಿದ್ದುಪಡಿ ತರುವುದು ಸರಿಯಲ್ಲ ಎಂದು ಇಲ್ಲಿ ಹೇಳುತ್ತೇನೆ.

ಎರಡನೆಯದಾಗಿ ಇದರಲ್ಲಿ 2ನೇ ಕ್ಲಾಸಿಗೆ ಒಂದು ತಿದ್ದುಪಡಿ ತಂದು ಕೆಲವು ಸೆಕ್ಷನ್‌ಗಳಲ್ಲಿ ಡೆಪ್ಯೂಟಿ ಕಮಿಷನರು ಎಂದು ಇರುವ ಜಾಗದಲ್ಲಿ ಇದನ್ನು ತೆಗೆದು ತಹಶೀಲುದಾರರು ಎಂದು ಮಾಡಲು ಹೊರಟಿದ್ದಾರೆ. ಇದರಲ್ಲಿ ಎಲ್ಲ ಕಡೆಗಳಲ್ಲೂ ತಹಶೀಲುದಾರ ಎನ್ನುವ ಶಬ್ದ ಇರಬೇಕು ಎಂದು ಮಾಡುತ್ತಿದ್ದಾರೆ. ಇದೇ ಕಾನೂನಿನ ಒರಿಜನಲ್ ಆಕ್ಟ್‌ನಲ್ಲಿ ಕಲಂ 195 ಎನ್ನುವುದರಲ್ಲಿ ಡೆಲಿಗೇಷನ್ ಆಫ್ ಪವರ್ ಎನ್ನುವ ಒಂದು ಸೆಕ್ಷನ್ ಇದೆ. ಇದರಲ್ಲಿ ತಾವು ಸರಕಾರಕ್ಕೆ ಅಧಿಕಾರ ಕೊಟ್ಟಿದ್ದೀರಿ. ಇದರ ಪ್ರಕಾರ ಒಂದು ನೋಟಿಫಿಕೇಷನ್ ಹೊರಡಿಸಿ ಯಾವ ಯಾವ ಕಲಂ ಪ್ರಕಾರ ರೆವೆನ್ಯೂ ಅಧಿಕಾರಿಗಳು ಕಂದಾಯ ವಸೂಲಿ ಮಾಡಬಹುದು ಇತ್ಯಾದಿ ಕೆಲವು ಅಧಿಕಾರಿಗಳಿಗೆ 17ನೇ ಜೂನ್ 1966 ರಲ್ಲಿ ಎಸ್ ಓ 44784 ಎನ್ನುವ ಆರ್ಡರಿನಲ್ಲಿ ಪವರನ್ನು ಡೆಲಿಗೇಟ್ ಮಾಡಿದ್ದಾರೆ. ಇಲ್ಲಿ ಇಂತಹ ಒಂದು ತಿದ್ದುಪಡಿ ತಂದಿರುವಂತೆಯೇ ಹಿಂದೆ ಇದ್ದ ಒರಿಜಿನಲ್ ಆಕ್ಟ್‌ನಲ್ಲಿ ಇರುವ ಆರ್ಡರು ಎಸ್ ಓ 84 ರ ಪ್ರಕಾರ ಇದರಲ್ಲೂ ಕೂಡ ತಹಶೀಲುದಾರರಿಗೆ ಅಧಿಕಾರ ಕೊಟ್ಟು ಅವರು ಅದನ್ನು ಈಗ ಚಲಾಯಿಸುತ್ತಿದ್ದಾರೆ. ಸೆಕ್ಷನ್ 195 ರ ಪ್ರಕಾರ ನಾನು ಇದನ್ನು ತಪ್ಪು ಎಂದು ಹೇಳಲು ಸಿದ್ಧವಾಗಿಲ್ಲ. ಆದರೆ ಇಲ್ಲಿ ಇಂತಹ ಒಂದು ತಿದ್ದುಪಡಿಯನ್ನು ತಂದು ಇದನ್ನು ಕಾನೂನು ಮಾಡಬೇಕಾದ ಅಗತ್ಯವೇನಿತ್ತು ! ಈಗಾಗಲೇ ಆರ್ಡಿನೆನ್ಸ್ ತೆಗೆದುಕೊಂಡು ಬಂದಿರುವುದರಿಂದ ಅದರಂತೆ ಎಲ್ಲವೂ ಕಾರ್ಯಗತವಾಗುತ್ತದೆ. ತಹಶೀಲುದಾರರುಗಳಿಗೆ ಇದರ ಪ್ರಕಾರ ಅಧಿಕಾರ ಬಂದಿರುವುದರಿಂದ ಇಂತಹ ಒಂದು ಕಾನೂನು ಮಾಡುವ ಅವಶ್ಯಕತೆಯೇ ಇರಲಿಲ್ಲ. ತಹಶೀಲುದಾರರು ಸರಕಾರ ಆಗಲೇ ಹೊರಡಿಸಿರುವ ನೋಟಿಫಿಕೇಷನ್‌ಗಳ ಮೂಲಕ ಎಲ್ಲವನ್ನೂ ಕೈಗೊಳ್ಳುತ್ತಿದ್ದಾರೆ. ಇಲ್ಲಿರುವ ತಿದ್ದುಪಡಿಯಲ್ಲಿ ಡೆಪ್ಯೂಟಿ ಕಮಿಷನರು ಎಂದು ಇರುವ ಶಬ್ದ ತೆಗೆದು ತಹಶೀಲುದಾರರು ಎಂದು ಇಡಬೇಕು ಎಂದು ಸೂಚನೆ ಮಾಡುವಂತೆ ಮುಂದೆ ಅಸಿಸ್ಟೆಂಟು ಕಮಿಷನರುಗಳು ಆಗಬಹುದು ಇಲ್ಲವೇ ಡೆಪ್ಯುಟಿ ತಹಶೀಲುದಾರರುಗಳು ಬರಬಹುದು. ಇವೆಲ್ಲ ಒರಿಜಿನಲ್ ಆಕ್ಟು ಪ್ರಕಾರ ಇರುವ ಸೆಕ್ಷನ್ 195 ರಂತೆ ಸರ್ವ ಅಧಿಕಾರಗಳನ್ನೂ ಕೊಟ್ಟಿದ್ದಾರೆ. ಇದನ್ನು ಒಂದು ನೋಟಿಫಿಕೇಷನ್ ಮೂಲಕ ತಹಶೀಲುದಾರರು ಮಾಡಬೇಕೆನ್ನುವುದನ್ನು ಅವರಿಗೆ ವಹಿಸಬಹುದಾಗಿತ್ತು. ಇಲ್ಲಿ ಈಗಾಗಲೇ ಸೆಕ್ಷನ್ 195 ಎಂದು ಇರುವುದರಿಂದ ಇಂತಹ ಒಂದು ತಿದ್ದುಪಡಿ ಅನಾವಶ್ಯಕ ಎಂದು ನನಗೆ ಕಂಡುಬರುತ್ತದೆ. ಇವೆಲ್ಲಾ ಸೌಕರ್ಯಗಳು ಈಗ ತಂದಿರುವ ಆರ್ಡಿನನ್ಸ್‌ನಲ್ಲೇ ಬರುತ್ತಿದೆ. ಇನ್ನು ಈ ಬಿಲ್‌ನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇದರಲ್ಲಿ ಇರುವ ಸೆಕ್ಷನ್ 50, 56 ಹಾಗೂ 40 ರಲ್ಲಿ ಇದರ ಉಪಯೋಗ ಎಷ್ಟರಮಟ್ಟಿಗೆ ಆಗುತ್ತದೆ ಎಂಬುದನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ನಾನು ತಿಳಿದುಕೊಂಡಂತೆ ಇದರ ಉದ್ದೇಶ ಎಲ್ಲರಿಗೂ ಗೊತ್ತಾಗಿದೆ. ಸರಕಾರಕ್ಕೂ ಇದು ಗೊತ್ತಾಗಿದೆ. ಸರಕಾರ ವಶಮಾಡಿಕೊಂಡಿದ್ದ ಜಮೀನನ್ನು ಅರ್ಹತೆ ಇಲ್ಲದವರು ಪಡೆದಿದ್ದರೆ ಅಂತಹ ಜಮೀನನ್ನು ಸರಕಾರದವರೇ ತೆಗೆದುಕೊಂಡು ಅರ್ಹತೆಯುಳ್ಳವರಿಗೆ ಕೊಡುವ ಅಧಿಕಾರ ಡೆಪ್ಯುಟಿ ಕಮಿಷನರಿಗೆ ಇಲ್ಲವೇ ಡಿವಿಜನಲ್ ಕಮಿಷನರ ಕಡೆಗೆ ಇದೆ. ಹೀಗೆ ಸರಕಾರದವರು ಅಸೈನ್‌ಮೆಂಟುಗಳನ್ನು ಕಾನ್‌ಫಿಸ್‌ಕೇಟು ಮಾಡುವುದು ತಪ್ಪು ಎಂದು ಕೋರ್ಟುಗಳಲ್ಲಿ ಅನೇಕ ಕೇಸುಗಳೂ ಆಗಿವೆ ಮತ್ತು ಇವು ಎ. ಐ. ಆರ್. ನಲ್ಲಿ ರಿಪೋರ್ಟೂ ಆಗಿವೆ. ಈ ಬಿಲ್ಲಿನ ಪ್ರಕಾರ ಸರಕಾರಕ್ಕೆ ಅಧಿಕಾರ ಇಲ್ಲ ಎಂದು ಎಷ್ಟು ಕೇಸುಗಳನ್ನು ಕಿತ್ತುಹಾಕಿದ್ದಾರೆ ? ಮೈಸೂರು ಲ್ಯಾಂಡು ರೆವೆನ್ಯೂ ಆಕ್ಟು ಪ್ರಕಾರ ರೆವೆನ್ಯೂ ಅಪೆಲೇಟ್ ಟ್ರಿಬ್ಯುನಲ್ ಎಂದು ಮಾಡಿ ಇದು ಯಾವ ರೀತಿ ಕೆಲಸ ಮಾಡಬೇಕು ಎಂದು ಇವರಿಗೆ ಎಲ್ಲಾ ಅಧಿಕಾರಗಳನ್ನು ಕೊಡಲಾಗಿದೆ ಮತ್ತು ಇದಕ್ಕೆ ಅನುಕೂಲವಾದ ಕಾಯದೆಯನ್ನು ಕೂಡ ಮಾಡಲಾಗಿದೆ. ಈಗ ಇಲ್ಲಿ ಇದನ್ನು ತಪ್ಪಿಸಿ ಡೆಪ್ಯೂಟಿ ಕಮಿಷನರವರ ಕಡೆಗೆ ಇಲ್ಲವೇ ಡಿವಿಜನಲ್ ಕಮಿಷನರವರ ಕಡೆಗೆ ಕೊಡುವುದು ಸರಿಯಲ್ಲ ಎಂದು ನಾನು ಇಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ರೆವೆನ್ಯೂ ಅಪೆಲೇಟ್ ಟ್ರಿಬ್ಯುನಲ್ ಎಂದು ಮಾಡಿ ಇದರಲ್ಲಿ ಐ. ಎ. ಎಸ್. ದರ್ಜೆಯ ಅಧಿಕಾರಿಗಳನ್ನು ಇಟ್ಟು ಇವರುಗಳು ಚೆನ್ನಾಗಿ ಕೆಲಸ ಮಾಡುತ್ತಿರುವಾಗ ಇದಕ್ಕೆ ವಿನಾ ಕಾರಣ ಒಂದು ತಿದ್ದುಪಡಿ ತರುವುದು ಅಸಮಂಜಸವಾಗುತ್ತದೆ. ಆದುದರಿಂದ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಆರ್ಡಿನೆನ್ಸ್ ಎಂದು ಆಗಲೇ ಮಾಡಿರುವಾಗ ಇಂತಹ ಒಂದು ತಿದ್ದುಪಡಿ ಕಾಯದೆ ತರಲು ಸರಕಾರಕ್ಕೆ ಸಮಂಜಸವಾದ ಕಾರಣಗಳೂ ಇರಲಿಲ್ಲ. ಆದುದರಿಂದ ನಾನು ಈ ಬಿಲ್ಲನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri D. DEVARAJ URS.—Sir, may I make a suggestion ? There is already an ordinance on this subject. So, the Government is anxious to see that this amendment Bill is passed in this Session only. I learn that there is still time for the ordinance because the Bill can be made

(SRI D. DEVARAJ URS)

into law within six weeks from the date of the ordinance. The next sittings of the House will begin during this month by about the 19th or 20th. If we calculate, it will be within the six weeks period. So my suggestion is, because so many Members want to speak on the subject and so many amendments have been tabled, because there are some sections which have some deeper implications, and so many speakers want to make their contributions to this Bill by making their suggestions based on local experience, I suggest and I appeal through the Chair to the Government that this Bill need not to hustled through like this. I hope wisdom will dawn on the Government and they will try to bring some more amendments I therefore suggest that this Bill be taken up when the House meets again and finally we can pass the Bill before the lapse of the six weeks period. That is my humble suggestion to the Government.

ಶ್ರೀ ಬಿ. ಭಾಸ್ಕರ್ ಶೆಟ್ಟಿ (ಕಾಪು).–ಸ್ವಾಮಿ, ಮಾನ್ಯ ದೇವರಾಜ ಅರಸ್ ಅವರು ಹೇಳಿದ್ದನ್ನು ನಾನು ಅನುಮೋದನೆ ಮಾಡುತ್ತೇನೆ. ಇದು ಬಹಳ ಪ್ರಾಮುಖ್ಯವಾದ ಬಿಲ್. ಮಾತನಾಡ ತಕ್ಕಂಥ ಸದಸ್ಯರು ಬಹಳ ಜನ ಇದ್ದಾರೆ. ಅಲ್ಲದೆ 94 (ಎ) ನಲ್ಲಿ ಬಹಳ ಕಾಂಪ್ಲಿಕೇಟೆಡ್ ಆದಂಥ ಕ್ಲಾಜುಗಳು ಇವೆ. ಆದ್ದರಿಂದ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟು ಮುಂದೆ ಮತ್ತು ಸಭೆ ಸೇರಿದಮೇಲೆ ಈ ಬಿಲ್ಲನ್ನು ಮುಗಿಸುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಅನ್ ಆಥರೈಸೆಡ' ಕಲ್ಟಿವೇಷನ್ ಎಷ್ಟು ಎಕರೆ ಇದೆ ಮತ್ತು ಯಾವ ಯಾವ ತರಹದ ಭೂಮಿ ಎಷ್ಟೆಷ್ಟು ಎಕರೆ ಇದೆ ಎಂದು ಮಾನ್ಯ ಸಿದ್ದವೀರಪ್ಪನವರು ಕೇಳಿದಾಗ ಮಾನ್ಯ ಮಂತ್ರಿಗಳು ಆ ವಿವರ ಇಲ್ಲ ಎಂದು ಹೇಳಿದರು. ಮುಂದೆ ಮತ್ತೆ ಸಭೆ ಸೇರಿದಾಗ ಈ ಬಿಲ್ಲನ್ನು ತೆಗೆದುಕೊಂಡರೆ ಆ ವಿವರಗಳನ್ನು ತರಿಸಿಕೊಳ್ಳುವುದಕ್ಕೆ ಮಾನ್ಯ ಮಂತ್ರಿಗಳಿಗೆ ಸಮಯ ಸಿಕ್ಕುತ್ತದೆ. ಈ ಕಾರಣದಿಂದ ಈ ಬಿಲ್ಲನ್ನು ಈ ದಿನವೇ ಮುಗಿಸದೆ ಮುಂದೆ ಮತ್ತೆ ಸಭೆ ಸೇರಿದಾಗ ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

Sri D. DEVARAJ URS.—Sir, I was not in the House when the Leader of the House, it appears made a suggestion for sending this Bill to the Select Committee. Even that is a good suggestion. Within the brief period between now and the next session, you may have a term of members to constitute a Select Committee and let it be gone through in the Select Committee and after receipt of that report, this Bill may be passed. Even that is a good suggestion. I hope the Government will see its way to accept my suggestion.

Sri K. PUTTASWAMY.—Sir, the only amendment which is a material amendment to the Act is 94A. The provisions of section 94A have been considered at several stages. Different situations exist in different parts of the State. Sir, Hon'ble Members know that in the areas coming from erstwhile Madras State, there was what was called the Shivai Jamabandi. The Agriculturists were encouraged by the State to settle and bring the arable land under cultivation. It is called Kumki Rights. They were not required to take the permission of the Department. They could come and settle down and bring the land under cultivation and after some time, apply to the Revenue Department for the grant of that land. Unfortunately in 1964 the Land Revenue Act was passed and at that time, this situation was not taken into consideration. After the passing of 1964 Act, all those persons

who had brought the land under cultivation under Shivaji Jamabandi or Kumki Rights were unable to get their lands granted in their favour. It is but right that they should be granted the lands they are cultivating. Therefore, the provisions embodied in section 94 A are very necessary. It is only with a view to enable the Department to grant the lands to such persons this provision is brought.

SRI C. K. RAJAIAH SHETTY.–The States Reorganisation took place in 1956. Why are they still making these mistakes ?

SRI K. PUTTASWAMY.—Let my friend listen to me. Therefore, it is very necessary to enable the Department to give lands to such of those persons who have taken all the trouble to bring the lands under cultivation. At the time of their entry on the land, it was not considered illegal. On the other hand, the State encouraged these people to bring the land under cultivation. In erstwhile Mysore also in the year 1942–43, a system of land grant was intoduced even under the grow-more-food-scheme. Land was cot actually granted to them. They were asked to bring the land under cultivation, with a promise that if they brought the land under cultivation, and if they continuously cultivated the land for a period fo five years, the land would be granted to them. Even in such cases, the land has not been finally granted. It was a permissive possession, not grant. In order to enable these persons to get land granted in their favour, such a provision is very necessary.

12–00 P.M.

There is one other thing and the hon. Member Sri Devaraj Urs also knows it personally. It is within the knowledge of most of us coming from rural areas that persons encroach upon land for better cultivation of their lands. wherever encroachment has taken place, it is with the intension that such land is necessary for better cultivation of the land that he already holds. So it is very necessary that such land should be granted. Under the present section 94 there is no discretion left with the Deputy Commissioner. He has to evict him and that it going to cause a lot of hardship. With a view to remedy that, the provision contained in 94(A) has been brought. We are only laying down the principle. The House may see the last sentence of section 94A. It says :

> "The sum to be charged, the grant to be made and the terms and conditions to be imposed shall be subject to such rules as may be made by the State Government in this behalf."

So the Government will have to frame rules regulating the grant of lands under a given circumstance. Under the Land Reveune Act such rules will be have to be placed before the House. Therefore the matter is not going to be finally disposed of here. This only enables Government to frame rules and the rules that are framed will be placed on the table of this House. Any hon. Member of this House may suggest

(SRI K. PUTTASWAMY)

any amendments. Therefore, no injury is going to be be done to the interests of any person and so this provision is very necessary and at this stage I regret that it would be very difficult to accept the suggestions made by Mr. Devaraj Urs and postpone the consideration of this Bill.

Sri B. B. SAYANAK (Blgaum).—Mr. Speaker, Sir, I rise to oppose the amendments to the Mysore Land Revenue Act. This Bill, the Mysore Land Revenue (Amendment) Bill, 1970, has been brought in the name of the Harijan, poor and downtrodden people. By passing this Bill the benefit goes only to the big persons and that too the Congress people. Why is it so ? The poor people encroach one or two acres of land, but Congressmen and other big persons encroach 70 to 80 acres of land. According to me, if any person has encroached 2, 3, 4 or 5 acres of land, that must be regularised and not above that. That is my suggestion.

The Government have given appellate powers to the Divisional Commissioner and the Revenue Authorities. According to me, the Revenue Authorities are most corrupt and these powers should not be handed over to the Divisional Commissioner or the Deputy Commissioner. These powers must be handed over to the Revenue Appellate Tribunal. The last sentence of the proviso to the new section 94A should be seen very carefully : "...unless the value of the land fixed is paid in full". How is it possible for the poor Harijans to pay the same ? It is not possible for them to pay the price in one lumpsum. So I suggest to Government that this amount must be taken in easy instalments from the poor people.

With these suggestions, I thank the Chair.

†ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ, ನಮ್ಮ ಮುಂದೆ ಇರತಕ್ಕ ಭೂಕಂದಾಯದ ತಿದ್ದುಪಡಿಯನ್ನು ವಿರೋಧಿಸುತ್ತ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ. 94 (ಎ) ಕ್ಲಾಜನ್ನು ಹೊಸದಾಗಿ ಸೇರಿಸಬೇಕು ಎಂಬ ತಿದ್ದುಪಡಿ ಏನಿದೆ ಇದರಿಂದ ರೈತರಿಗೆ ಕಿರುಕುಳ ಬರಬಹುದು ಎಂದು ನಾನಾದರೂ ಭಾವನೆ ಮಾಡಿದ್ದೇನೆ. ಅದರ ಜೊತೆಗೆ ಆಕ್ರಮಿಸಿರತಕ್ಕ ಭೂಮಿಯ ಸರ್ವೆ ಸೆಟಲ್‌ಮೆಂಟ್ ಯಾವ ಕಾಲದಿಂದಲೂ ಆಗಿಲ್ಲ. ಕಂದಾಯವನ್ನು ಜಾಸ್ತಿ ಮಾಡುವ ಸಲುವಾಗಿ ರೀ ಕ್ಲಾಸಿಫಿಕೇಷನ್ ಮಾತ್ರ ಮಾಡಿ ಸರ್ವೆ ಮಾಡದೆ ಇರುವುದರಿಂದ, ಭೂಮಿಯನ್ನು ಉಳುಮೆ ಮಾಡುತ್ತ ಮಾಡುತ್ತ ಎಷ್ಟೋ ವರ್ಷದಿಂದ ಸ್ವಲ್ಪಮಟ್ಟಿಗೆ ಎನ್‌ಕ್ರೋಚ್‌ಮೆಂಟ್ ಆಗಿರುವುದು ಸ್ವಾಭಾವಿಕವಾಗಿದೆ. 10 ಕುಂಟೆ, 20 ಕುಂಟೆ, ಒಂದು ಎಕರೆ, ಎರಡು ಎಕರೆ ಹೀಗೆ ಎನ್‌ಕ್ರೋಚ್‌ಮೆಂಟ್ ಆಗಿರುತ್ತದೆ. ಆದರೆ 1964ರಲ್ಲಿ ಏನೊಂದು ತಿದ್ದುಪಡಿಯನ್ನು ತಂದರೋ ಅದು ಬಹಳ ತಾಪತ್ರಯ ಕೊಟ್ಟಿದೆ, ಆದ್ದರಿಂದ ರೈತರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ, ಒಂದು ಎಕರೆಗೆ 500 ರೂಪಾಯಿ ಜುಲ್ಮಾನೆ ಹಾಕಬಹುದು ಎಂದು ಅದರಲ್ಲಿ ಹೇಳುತ್ತಾರೆ. ಆದರೆ ಕೆಲವು ತಹಸೀಲ್ದಾರರು ಎಷ್ಟು ಭೂಮಿ ಒತ್ತುವರಿಯಾಗಿದೆ ಎನ್ನುವುದನ್ನು ನೋಡದೆ ಒಂದು ತಕರಾರು ತಃಖ್ತೆ ಕೇಸು ಬಂದರೆ 500 ರೂಪಾಯಿ ಫೈನ್ ಹಾಕುತ್ತಾರೆ. ಅದರಲ್ಲಿ 5 ರೂಪಾಯಿ ಉತ್ಪತ್ತಿ ಬರುತ್ತದೋ, 15 ರೂಪಾಯಿ ಉತ್ಪತ್ತಿ ಬರುತ್ತದೋ ಇಲ್ಲವೋ 94 (A) ಪ್ರಕಾರ ತಂದಿರತಕ್ಕ ತಿದ್ದುಪಡಿಯನ್ನು ನಾನು ಸಂತೋಷದಿಂದ ಸ್ವೀಕರಿಸಿದರೂ ಕೂಡ ಇದರಲ್ಲಿ ಕೆಲವು ವಿಚಾರಗಳನ್ನು ಎತ್ತಿ ತೋರಿಸಬೇಕಾಗುತ್ತದೆ. ಎನ್‌ಕ್ರೋಚ್‌ಮೆಂಟ್ ಆಗತಕ್ಕಂತಹ ಭೂಮಿಗೆ ಮಾರ್ಕೆಟ್ ವ್ಯಾಲ್ಯೂನ ಎರಡುಪಾಲು ಹಾಕಬೇಕೆಂದು ಹೇಳುತ್ತಾರೆ. ಮಾರ್ಕೆಟ್ ವ್ಯಾಲ್ಯೂ ಅಂದರೆ, ಅಲ್ಲಿರುವ ಗುಮಾಸ್ತ ಯಾರು ಇರುತ್ತಾನೆ, ಅವನಿಗೆ ಅನುಕೂಲವಾಗುವ ಹಾಗೆ ನೋಡಿಕೊಂಡ ಪಕ್ಷದಲ್ಲಿ, ಅವನು ಅವನ್ನು ಹೇಗೆ ಬೇಕಾದರೂ

ಮಾಡಬಹುದು. ಅವನು ಕಡಿಮೆ ಬೆಲೆ ಇರುವ ಸರ್ವೆ ನಂಬರನ್ನು ನೋಡಿಕೊಂಡು ಬೇಕಾದರೆ ಮಾಡಬಹುದು, ಇಲ್ಲವೇ ಹೆಚ್ಚು ಬೆಲೆ ಇರುವ ಸರ್ವೆ ನಂಬರ್ ನೋಡಿಕೊಂಡು ಬೇಕಾದರೂ ಮಾಬಹುದು. ಕೆಲವು ಕಡೆ 30-35 ವರ್ಷ ಸರ್ವೆಯೇ ಆಗಿಲ್ಲ. ಇದರಿಂದ ಕೆಲವು ಜನರಿಗೆ ಎರಡು ಸಾವಿರ, ಮೂರು ಸಾವಿರ ರೂಪಾಯಿ ಕೂಡ ಹಾಕಬಹುದು. ಆದ್ದರಿಂದ ಈ ಡಬಲ್ ದಿ ಮಾರ್ಕೆಟ್ ವ್ಯಾಲ್ಯು ಎಂದು ಏನಿದೆ, ಅದನ್ನು ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಮುಂದೆ ಶಾಸನ ತರುವಾಗ ಸಹ ಈ ಮೊಬಲಗನ್ನು 50-100 ರೂಪಾಯಿ ಎಂದು ಮಾಡಿದರೆ ಅನುಕೂಲ ವಾಗುತ್ತದೆಂದು ಹೇಳುತ್ತೇನೆ. 49-50ನೇ ತಿದ್ದುಪಡಿಯ ವಿಚಾರವಾಗಿ ಈಗಾಗಲೇ ಬಹಳ ಜನರು ಹೇಳಿದ್ದಾರೆ, ಸರ್ಕಾರ ವ್ಯವಸ್ಥಿತವಾದ ರೀತಿಯಲ್ಲಿ ನಡೆಯುವುದಕ್ಕೋಸ್ಕರ ಕಾರ್ಯಾಂಗ ಮತ್ತು ನ್ಯಾಯಾಂಗವನ್ನು ಬೇರೆ ಬೇರೆ ಇಟ್ಟರೂ ಅದಕ್ಕೆ ಒಂದು ಹೊಂದಾಣಿಕೆ ಬೇಕು. ಜಿಲ್ಲಾಧಿಕಾರಿಯಿಂದ ಟ್ರಿಬ್ಯೂನಲಿಗೆ ಅಪೀಲು ಹೋಗುವುದು ಸಕ್ರಮವಾಗಿದೆ. ಆದರೆ ಇದನ್ನು ನಂತರ ಸರ್ಕಾರ ಯಾಕೆ ತೆಗೆದುಕೊಂಡರು ಎಂದು ಗೊತ್ತಿಲ್ಲ. ಕಷ್ಟಪಡತಕ್ಕ ರೈತರಿಗೆ ಅನುಕೂಲ ಮಾಡತಕ್ಕ ರೀತಿಯಲ್ಲಿ, ಸರ್ಕಾರ ಯೋಗ್ಯವಾದ ಆಡಳಿತ ನಡೆಸುವ ದೃಷ್ಟಿಯಲ್ಲಿ, ನ್ಯಾಯವಾಗಿ ಟ್ರಿಬ್ಯೂನಲಿಗೆ ಹೋಗಬೇಕಾಗಿತ್ತು. ಆದರೆ ಸರ್ಕಾರಕ್ಕೆ ಹೋದರೆ ಇದರಿಂದ ಘನತೆ ಬರುತ್ತದೆಯೇ ! ಅಂಥ ಒಂದು ಕಾನೂನು ತೆಗೆದುಕೊಂಡು ಕೆಲಸ ಮಾಡಿದಂತಾಗುವುದಿಲ್ಲ. ಆ ದೃಷ್ಟಿಯಿಂದ ನಾನು ಇದನ್ನು ವಿರೋಧಿಸುತ್ತೇನೆ. ಈ ಡಬಲ್ ದಿ ಮಾರ್ಕೆಟ್ ವ್ಯಾಲ್ಯೂ ಎಂದು ಏನು ತಂದಿದ್ದಾರೆ, ಅದು ಸರಿಯಾದುದಲ್ಲ ಮತ್ತು ಆದರಿಂದ ಸ್ವಲ್ಪ ಜಮೀನು ಇರತಕ್ಕವರಿಗೆ ಬಹಳ ತೊಂದರೆಯಾಗುತ್ತದೆ. ಅದನ್ನು ಕಡಮೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†Sri V. N. PATIL (Humnabad).—Sir, any law relating to the distribution of lands unauthorisedly occupied, should be deterrent measure to the rich who have made encroachments and should be a remedial measure for the poor. But in the present Bill under discussion, there is no differentiation between the poor and the rich. If an agricultural labourer who has no land, happens to occupy Government land, he should not be charged Rs. 500 per acre for granting that land to him. Supposing a poor peasant encroaches upon two acres of dry land for eking out his livelihood; if he has to pay Rs. 2,000 for regularisation of the uhauthorised occupation it works as a great hardship on him; he will not be in a position to pay that value for the land under his occupation. Government has made no provision at all to show concession to the poor or exempt them from payment of the value of the land in cases of unauthorised occupation. The insertion of new Section 94A by Clause 7, on the other hand, goes to help these greedy rich landlords and plantation owners who have encroached upon 200 and 300 acres of land. If they pay twice the market value of the land unauthorisedly occupied by them, those lands can be granted to them. They will glady pay that value and become owners. In Abkari law, there is accelerated rate of punishment; if for the first offence, three months is awarded, for the second offence six months' imprisonment will be given; for the third offence, still more punishment is given. After all, the motive of the poor and landless in occupying lands is for personal cultivation to make out a living and, therefore, it has to be considered to be genuine; it is out of sheer economic necessity they have encroached upon a land. In fact, they have actually helped the country in growing more foodgrains. But that is not the case with the big zamindars and plantation owners who have usurped lands to the extent of 500 acres. If they are allowed to build their commercial empire, what should be the inference ?

(SRI V. N. PATIL)

Government is lenient to the rich landlord. It is only to facilitate him to enlarge his empire that Government has brought this amending Bill. While shedding some crocodile tears for the poor who have occupied small bits of land, an attempt has been made to help those rich landlords who have encroached more than hundred acres of land. Let the Government make a provision that if the person who has made encroachment is in possession of land to the extent of the minimum holding, let the land under his unauthorised occupation be distributed to others. If I own 200 acres and grab another 300 acres by encroachment, Government will be allowing me four times the family holding and giving a license to commit breach of law, to defraud law and the Constitution. It is necessary to make a provision that one who has got the minimum holding to the extent of ceiling and who is in unauthorised occupation of lands, shall be liable to a penalty of ten time the value of the land unauthorisedly occupied. If a poor common man is in occupation of one acre of land unauthorisedly, give him that acre of land free of cost; if you bring in such a provision, you will be doing social justice. For plantation owners, there is no ceiling. If Government are honest in their intention to help the poor, landless class, no exemption should be given to plantation lands. In that case, plenty of surplus land will be availble to the Government.

I thank the Chair for giving me this opportunity to speak.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಸನ್ಮಾನ್ಯ ಸಭಾಪತಿಯವರೇ, ಸರ್ಕಾರದವರು ಸದುದ್ದೇಶದಿಂದ ಈ ಮಸೂದೆಗೆ ತಿದ್ದುಪಡಿಯನ್ನು ಸಭೆಯ ಮುಂದೆ ತಂದಿದ್ದಾರೆ. ಆದರೆ ಅದು ಕಾರ್ಯರೂಪದಲ್ಲಿ ಇಲ್ಲ. ಸೆಕ್ಷನ್ 94(A) ಪ್ರಕಾರ ಯೋಚನೆ ಮಾಡಿ ನೋಡುವುದಾದರೆ, ಬಹಳ ಅನ್ಯಾಯ ಆಗತಕ್ಕ ಪರಿಸ್ಥಿತಿ ಇದೆ. ಸ್ವಾಮಿ, ಈ ಅಕ್ರಮ ಸ್ವಾಧೀನ ಅನುಭೋಗಕ್ಕೆ ಸಂಬಂಧಪಟ್ಟ ಈ ವಿಷಯವನ್ನು ನಾವು ಕೂಲಂಕಷವಾಗಿ ಪರಿಶೀಲನೆ ಮಾಡಿದರೆ, ಅಕ್ರಮವಾಗಿ ಭೂಮಿಯನ್ನು ಸ್ವಾಧೀನಮಾಡಿಕೊಂಡು ವ್ಯವಸಾಯಕ್ಕೆ ಉಪಯೋಗಿಸಬಹುದಾಗಿದೆ. ಒಂದನೆಯ ತರಗತಿ ಸರ್ಕಾರದವರ ಯಾವ ಒಂದು ಗಣನೆಯೂ ಇಲ್ಲದೆ ದುರಾಸೆಯಿಂದ ಆಕ್ರಮಿಸಿಕೊಂಡಿರತಕ್ಕವರು. ಇವರಿಗೆ ಬೇಕಾದರೆ ಕಟ್ಟುನಿಟ್ಟಾಗಿ ಕಾನೂನು ಜಾರಿಗೆ ತನ್ನಿ ಸಂತೋಷ. ಆದರೆ ಇವತ್ತು ಅನೇಕ ಬಡವರು ಜೀವನಕ್ಕೆ ಬೇರೆ ಮಾರ್ಗವಿಲ್ಲದೆ ದರಖಾಸ್ತು ಭೂಮಿಯನ್ನು ಉಳುಮೆ ಮಾಡುತ್ತಿದ್ದಾರೆ. ಅವರಿಗೆ ಇದರ ಪ್ರಕಾರ ಅನುಕೂಲವಾಗುವಂತೆ ನೋಡಬೇಕಲ್ಲದೆ, ಅನಾನುಕೂಲ ಮಾಡಬಾರದು. ಹೀಗೆ ಭೂಮಿಯನ್ನು ಉಳುಮೆ ಮಾಡುವುದಕ್ಕೆ ಉತ್ತೇಜನ ಕೊಟ್ಟವರೂ ದೊಡ್ಡ ಮನುಷ್ಯರೇ ಮತ್ತು ಅದಕ್ಕೆ ಬೇಕಾದ ಸಂಭಾವನೆಯನ್ನೂ ಪಡೆಕೊಂಡಿರುತ್ತಾರೆ. ಅಂಥ ಬಡ ಜನರು ಅನೇಕ ಮಂದಿ ಇದ್ದಾರೆ. ಇವರಿಗೆ 94 (ಎ) ಪ್ರಕಾರ ಇವತ್ತು ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳು ಬೆಲೆ ಆಗುತ್ತದೆಂದು 2 ಎಕರೆಗಳಿಗೆ ಎರಡು ಸಾವಿರ ರೂಪಾಯಿಗಳಷ್ಟು ಹಾಕಿದರೆ ಖಂಡಿತವಾಗಿ ಆಗುವುದಿಲ್ಲ. ಅಂತವನಿಗೆ ಅನ್ಯಾಯವಾಗುತ್ತದೆ. ಮೂರನೆಯವರು ಯಾರಿಗೋ ಭೂಮಿಯನ್ನು ಮಂಜೂರುಮಾಡುವುದರಿಂದ ಅಂತಹವರಿಗೆ ಪಟ್ಟಾ ಲ್ಯಾಂಡ್ ಬಗ್ಗೆ ಲ್ಯಾಂಡ್ ರಿಫಾರಮ್ಸ್ ರೂಲ್ಸನ್ನು ತಂದಿದ್ದಾರೆ. ಹಿಂದೆ ಅಂತಹ ಪದ್ಧತಿ ಜಾರಿಗೆ ಇರಲಿಲ್ಲ. ಕೆಲವರಿಗೆ 2–3 ಎಕರೆ ಮಂಜೂರಾಗಿ 20–30 ವರ್ಷಗಳಿಂದ ಕೆಲವು ಜಮೀನುಗಳನ್ನು ಅಳತೆ ಮಾಡಿಲ್ಲ. ಅವನ ಅಂದಾಜು ಪ್ರಕಾರ ಉಳುಮೆ ಮಾಡಿರುವುದರಲ್ಲಿ ಹೆಚ್ಚಿಗೆ ಇಲ್ಲದೇ ಇರಬಹುದು. ಇಂಥಾದಕ್ಕೆ ಮಾರ್ಕೆಟ್ ರೇಟ್‌ಗಿಂತ 2ರಷ್ಟು ಹಣ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ಸರ್ಕಾರ ಮಾಡಿದಂಥ ತಪ್ಪಿಗೆ ಬಡವರು ಹೆಚ್ಚು ಬೆಲೆ ಕೊಡಬೇಕೆಂದು ಹೇಳುವುದು ಸಾಧುವಾದುದಲ್ಲ. ಸರ್ಕಾರ ಹೆಚ್ಚಿಗೆ ಬಡವರ ಮೇಲೆ ದಯೆ ತೋರಿಸಬೇಕು. ಮೊದಲು ಭೂಮಿಯನ್ನು ಮಂಜೂರು ಮಾಡುವಾಗ ಯಾವ ಧಾರಣೆಗೆ ಮಂಜೂರು ಮಾಡಿದ್ದರೊ ಅದೇ ಧಾರಣೆಗೆ

ಹೆಚ್ಚು ಜಮೀನನ್ನು ಕೊಡುವಾಗಲೂ ಕೊಡಬೇಕು. ಇದರಿಂದ ಸರ್ಕಾರಕ್ಕೂ ಲಾಭವಾಗುತ್ತದೆ, ಬಡವರಿಗೆ ಅನ್ಯಾಯವಾಗುವುದಿಲ್ಲ. ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಒಂದು ವಿಷಯವನ್ನು ಹೇಳಿದ್ದಾರೆ ಇನ್ನು ಮುಂದೆ ಶಿವಾಜಮ ಲ್ಯಾಂಡ್ ಮೇಲೆ ಭೂಕಂದಾಯ ಕಲೆಕ್ಟ್ ಮಾಡುತ್ತೇವೆಂದು. ಅದರ ಪ್ರಕಾರ 94 (ಎ)ನ್ನು ಜಾರಿಗೆ ತರುವ ನೀತಿ ತದ್ವಿರುದ್ಧವಾಗಿದೆ. ಜಮೀನು ಸಾಗುವಳಿ ಮಾಡುವುದಕ್ಕೆ ಸರ್ಕಾರದವರು ಅವಕಾಶ ಕೊಟ್ಟು ಅದನ್ನು ಕ್ರಮಪಡಿಸುವುದಕ್ಕಾಗಿ ದಳ್ಳಾಳಿ ಕೊಡಬೇಕೆಂದು ಹೇಳಿದ್ದು ಸಾಧುವಾದುದಲ್ಲ. ಇದರಿಂದ ಬಹಳ ಅನುಮಾನ ಬರುತ್ತದೆ. ಇದರಲ್ಲಿ ಡೆಪ್ಯುಟಿ ಕಮಿಷನರಿಗೆ ಡಿಸ್‌ಕ್ರಿಷನ್ ಪವರ್ ಕೊಡುವುದಕ್ಕೆ ಈಗಾಗಲೇ ಆಗಿರುವ ಅನ್ಯಾಯಗಳು ಬಹಳ ಜಾಸ್ತಿ ಇವೆ. ಮುಂದೆ ಇಂತಹ ಅನ್ಯಾಯಗಳು ಆಗುವುದಕ್ಕೆ ಅವಕಾಶ ಕೊಡಬಾರದು. ಒಂದು ಜಮೀನು ವಿಷಯದಲ್ಲಿ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಬೇಕಾದರೆ, ಹಳ್ಳಿಯಿಂದ ಪ್ರಾರಂಭವಾಗಿ ರೆವಿನ್ಯೂ ಇನ್‌ಸ್ಪೆಕ್ಟರ್, ತಹಸೀಲ್ದಾರ್, ಅಸಿಸ್ಟೆಂಟ್ ಕಮಿಷನರ್, ಡೆಪ್ಯೂಟಿ ಕಮಿಷನರ್ ದಾಟಿ ಬರಬೇಕು. ಇಷ್ಟು ಹಂತಗಳು ದಾಟಬರಬೇಕಾದರೆ, ಅಗ ಜಮೀನಿಗೆ ಕೊಡುವ ಧಾರಣೆ ಒಂದಕ್ಕೆ ನಾಲ್ಕರಷ್ಟು ಆಗುತ್ತದೆ. ಈ ಮಸೂದೆಯನ್ನು ಈ ಸಭೆಯ ಮುಂದೆ ತರುವ ಜೊತೆಗೆ ಇದಕ್ಕೆ ಸಂಬಂಧಪಟ್ಟ ರೂಲ್ಸನ್ನು ನಮ್ಮ ಎದುರಿಗೆ ಇಡಬೇಕು. ರೂಲ್ಸನ್ನು ನಾವು ಮುಂದೆ ಮಾಡುತ್ತೇವೆ. ಅವನ್ನು ಸರಿಪಡಿಸುತ್ತೇವೆಂದು ಈ ರೀತಿ ಡಿಸ್ಕ್ರಿಷನ್ ಕೊಡುವುದು ಸರಿಯಲ್ಲವೆಂದು ನಾನು ಸರ್ಕಾರಕ್ಕೆ ಸೂಚಿಸುತ್ತೇನೆ. ಇಷ್ಟೆಲ್ಲಾ ಅದಮೇಲೆ ಒಂದು ಪ್ರಾವಿಸೋ ಇಟ್ಟುಕೊಂಡಿದ್ದಾರೆ. ಡೆಪ್ಯುಟಿ ಕಮಿಷನರ್ ಅದನ್ನು ಮಾಡಬೇಕಾಗಿದೆ. ಸಾರ್ವಜನಿಕರಿಗೆ ಅವರು ತಿಳಿಸಿ ಬರತಕ್ಕ ಆಕ್ಷೇಪಣೆಗಳನ್ನು ಪರಿಶೀಲಿಸಿ ಕೊಡಬಹುದು. ಇವತ್ತು ಯಾರಾದರೂ ಒಬ್ಬರಿಗೆ ಜಮೀನು ಕೊಡುತ್ತೇವೆಂದು ಹೇಳಿದರೆ, ಪ್ರತಿಯೊಂದು ಹಳ್ಳಿಯಲ್ಲಿಯೂ ಈಗಾಗಲೇ ಭೂ ಕಂದಾಯ ಜಾಸ್ತಿ ಇರುವುದರಿಂದ, ಜನಗಳಿಗೆ ತುಂಬಾ ತೊಂದರೆಯಾಗುತ್ತದೆ. ಈ ರೀತಿ ತಲೆನೋವು ತಂದು ಅದಕ್ಕೆ ಔಷಧೋಪಚಾರ, ಪರಿಹಾರ ಕೊಡುವುದು ಸಾಧುವಾದುದಲ್ಲ. ಆದ್ದರಿಂದ ಇದನ್ನು ಡಿಲೀಟ್ ಮಾಡಬೇಕು. ಇದು ಸೆಲೆಕ್ಟ್ ಕಮಿಟಿಗೆ ಹೋಗಲು ಟೈಂ ಇಲ್ಲವೆಂದು ಹೇಳಿದರು. ಆದ್ದರಿಂದ ಮುಂದೆ ರೂಲ್ಸ್ ಮಾಡುವಾಗ ಮಂತ್ರಿಗಳು ನಮ್ಮೆಲ್ಲರ ಸಲಹೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬಡವರಿಗೆ ಅನ್ಯಾಯವಾಗದಂಥ ರೀತಿಯಲ್ಲಿ ಕಾನೂನುಗಳನ್ನು ಜಾರಿ ಮಾಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ನನ್ನ ತಿದ್ದುಪಡಿ ಮುಂದೆ ಇಲ್ಲಿ ಬರುತ್ತದೆ. ಆಗ ನಾನು ಮತ್ತೊಮ್ಮೆ ಎಲ್ಲ ವಿಷಯಗಳನ್ನೂ ಮಾತನಾಡುತ್ತೇನೆ.

ಕೊನೆಯದಾಗಿ ಇಷ್ಟು ಹೇಳಿ, ನನಗೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬೋಳ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ, ಸರ್ಕಾರದವರು ಸರ್ಕಾರದ ಭೂಮಿಯನ್ನು ಹಂಚುವ ಧೋರಣೆಯನ್ನು ನಾನು ಸ್ವಾಗತಮಾಡುತ್ತೇನೆ. ಈ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಯನ್ನು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಎಂದು ಇದೆ. ಅದು ಅಲ್ಲಿ ಪಟ್ಟಾ ತರಹ ಇದೆ. 365 ದಿವಸಗಳವರೆಗೂ ಅಲ್ಲಿನವರು ಸಾಗುವಳಿ ಮಾಡಬಹುದು. ಅವರಿಗೆ ಇತರೇ ಹಕ್ಕುಗಳು ಇವೆ. ಇದರ ಬಗ್ಗೆ ಅನೇಕ ಕೇಸುಗಳು ಮದ್ರಾಸ್ ಕೋರ್ಟಿಗೆ ಹೋಗಿ ತೀರ್ಮಾನವಾಗಿವೆ. ಸ್ಥಳದಲ್ಲಿರತಕ್ಕ ಕೃಷಿಕರು ಯಾರು ಬಾವಿ ತೋಡಿದ್ದಾರೆ, ಮನೆ ಕಟ್ಟಿಕೊಳ್ಳುವುದಕ್ಕೆ ಹೆಚ್ಚಿಗೆ ಕಾಮಗಾರಿ ಕೆಲಸಗಳನ್ನು ಮಾಡಿದ್ದಾರೆ. ತೋಟ ಮತ್ತು ಗದ್ದೆಗಳನ್ನು ಮಾಡಿದ್ದಾರೆ, ಅಂತಹವರಿಗೆ ಕೆಲವು ವರ್ಷಗಳು ಅದು ಅಸೈನ್‌ಮೆಂಟ್ ಆಗಿದೆ. ಅಲ್ಲಿ ಕುಮ್ಕಿ ಹಕ್ಕು ಇದ್ದುದರಿಂದ ಸಾಲವನ್ನು ಅವರಿಗೆ ಯಾವಾಗ ಬೇಕಾದರೂ ಮದ್ರಾಸ್ ಸರ್ಕಾರದವರು ಕೊಡುವುದಕ್ಕೆ ಅನುಕೂಲವಿತ್ತು. ಅನೇಕ ಸಂದರ್ಭಗಳಲ್ಲಿ ಅವರಿಗೆ ಅಲ್ಲಿ ಭೂಮಿಯನ್ನು ಫ್ರೀಯಾಗಿ ಕೊಡುತ್ತಿದ್ದರು. ಅವರಿಂದ ಮಾರ್ಕೆಟ್ ಧಾರಣೆಯನ್ನೂ ತೆಗೆದುಕೊಳ್ಳುತ್ತಿರಲಿಲ್ಲ. 20 ವರ್ಷಗಳು ಮೀರಿ ಜಮೀನನ್ನು ಉಪಯೋಗ ಮಾಡುತ್ತಿದ್ದರೆ ಅವರಿಗೆ ಅಲ್ಲಿನ ಕಾನೂನು ಪ್ರಕಾರ ಆ ಭೂಮಿಯ ಮೇಲೆ ಹಕ್ಕು ಬರುತ್ತಿತ್ತು ಆದ್ದರಿಂದ ಈ ಆಕ್ಟಿನ ಪ್ರಕಾರ ಆಕ್ರಮ ಅಲ್ಲಿ ಬರುವುದಿಲ್ಲ. ಆದುದರಿಂದ ಅವರ ಹಕ್ಕನ್ನು ಅವರಿಗೆ ಕೊಟ್ಟು ಮಾರ್ಕೆಟ್ ಧಾರಣೆ ರೀತಿ ಅವರಿಗೆ ಜಮೀನು ಕೊಡುವುದು ನ್ಯಾಯ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕನ್ನು ಪಡೆದು ನೂರಾರು ವರ್ಷಗಳವರೆಗೆ ಉಪಯೋಗ ಮಾಡುತ್ತಿದ್ದರೆ, ಅದು ಅವರಿಗೇ ಅಸೈನ್‌ಮೆಂಟ್ ಆಗಬೇಕು ಎಂದಿದೆ, ಸೆಕ್ಷನ್ 94 (ಎ) ಪ್ರಕಾರ ಇದು ಎನ್‌ಕ್ರೋಚ್‌ಮೆಂಟ್ ಆಗುವುದಿಲ್ಲ. ಅದಕ್ಕೆ ಸಮರ್ಪಕವಾದ ತಿದ್ದುಪಡಿ ಮಾಡಬೇಕು. ಇನ್ನು ರೂಲ್ಸ್ ಮಾಡುವಾಗ ಕುಂಕಿ ಹಕ್ಕಿನ ಪ್ರಕಾರ ಯಾರು ಭೂಮಿ ಕೇಳುತ್ತಾರೋ, ಅಂತಹವರಿಗೆ ಭೂಮಿಯನ್ನು ಹಂಚುವುದು ನ್ಯಾಯವಾಗಿದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri D. B. KALMANKER (Aland).—The amending Bill is, I think, more of political nature than observing some important norms at the time of distribution of lands. I have given some amendments to section 94 and new section that is to be inserted wherein I have stated that at the time of regularising such illegal possesions it has to be seen that the person who is in possession of such land, whether he holds any other land of his own or he is in occupation of some other lands as a tenant, are dealt with properly. We must to see that the intention of this amendment is made more useful. I learn that in many cases there are people who are in possession of such lands, graden lands and some other lands and who possess lands of their own also.

2-30 P.M.

The purpose of this amendment is to do some social justice. If the purpose of this amendment is to see that land hunger is satisfied, then I would wish that some provision is made to see that landless people who have encroached upon such lands should get the benefit of this and persons who already possess lands and who are not in need of lands do not get the benefit of this section. That is my contention. Here the Government want to have some rights ultimately to see that particular class of people benefit from this provision. That is why I say there is a political purpose. Otherwise there was no need to make some amendments to sections 49, 50, 56 and 57 wherein Government is ultimately to come to the picture. As it is, the Tribunals consist of Judges and officers of a high cadre who can do better work than Government. They can take a very impartial attitude keeping in view the social purpose. So I would request the Hon. Minister not to go in for an amendment of this nature to restrict the purpose of this section so as to help the landless and the needy. I want the Government to take very drastic steps to disposess such persons who are already possessing lands and not to take steps for the regularisation of those who are in illegal possession of lands. I can say that the ceiling may be put on the possesion of such small land holders and the ceiling may be fixed at one standard acre including the land held by them and the land held illegally by them, to be regularised. If this is done, I think the purpose will be served well and they will be having an economic holding for their cultivation. It is only then this section will have some useful purpose to serve. Otherwise it would be very dangerous. That is why it would have been better if this Bill had been taken up in the next session and sufficient time had been given for discussion of the various points of the amending Bill.

With this observations, I conclude.

†ಶ್ರೀ ಕೆ. ಪ್ರಭಾಕರ್ (ವರ್ತೂರು).—ಸ್ವಾಮಿ, ಈ ಕಾನೂನನ್ನು ಸರ್ಕಾರದವರು ತಂದಿರುವ ಉದ್ದೇಶ ಬಹಳ ಒಳ್ಳೆಯದು. ಇದರಲ್ಲಿ ಪದೇ ಪದೇ ಹೇಳುವ ವಿಷಯ ಎಂದರೆ ಸುಮಾರು ಎರಡು ಲಕ್ಷ ಎಕರೆ ಜಮೀನು ಬಗರ್ ಹುಕುಂ ಸಾಗುವಳಿ ಮಾಡುವುದಕ್ಕೆ ಹಳೇ ಮೈಸೂರಿನಲ್ಲಿ ಸರಕಾರದವರು ಒಂದು ರೀತಿಯಲ್ಲಿ ಅವಕಾಶ ಕೊಟ್ಟಿದ್ದಾರೆ. ಅವರಿಗೆ ಪ್ರೊಟೆಕ್ಷನ್

ಕೊಡುವುದು ಸರಿಯೆಂದು ಲಾ ಮಿನಿಸ್ಟರ್ ಹೇಳುತ್ತಾ ಇದ್ದಾರೆ. ಹಳೇ ಮೈಸೂರಿನಲ್ಲಿ ಬಗರ್ ಹುಕುಂ ಸಾಗುವಳಿ ಜಮೀನಿನಲ್ಲಿ ಬಡವರನ್ನು ಸೇರಿಸಿಲ್ಲ. ಇದು ನಮ್ಮ ದೌರ್ಭಾಗ್ಯ ಸ್ಥಿತಿ. ಹೊಸ ಮೈಸೂರು ಭಾಗದಲ್ಲಿ ಏನು ಪದ್ಧತಿ ಇದೆ, ಅದನ್ನು ಹಳೇ ಮೈಸೂರಿನಲ್ಲಿ ಜಾರಿಗೆ ತರುವುದರಿಂದ ಕೇವಲ ಬಡವರಿಗೆ ಅನ್ಯಾಯವಾಗುತ್ತದೆ. ದರಖಾಸ್ತು ಅರ್ಜಿ ಕೊಟ್ಟು ಭೂಮಿ ಮಂಜೂರು ಆಗಿದ್ದರೂ ಖದೀಮರು ಆ ಭೂಮಿಯನ್ನು ಉತ್ತುಕೊಂಡಿದ್ದಾರೆ. ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಹಳೇ ಅರ್ಜಿದಾರರಿಗೆ ಕೊಡುವುದು ಸರಿಯೆಂದು ಹೇಳುತ್ತೇನೆ. ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕಿ ಎಂದು ಕೆಲವು ಮಿತ್ರರು ಹೇಳಿದರು. ಇದಕ್ಕೆ ಸಂಬಂಧಪಟ್ಟ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋಗಿತ್ತು. ಆದರೆ ಆ ಸೆಲೆಕ್ಟ್ ಕಮಿಟಿ ರಿಪೋರ್ಟ್ ಬಂದಿಲ್ಲ. ಸರಕಾರದವರು ಈ ವಿಧೇಯಕದ ಕೆಳಗೆ ರೂಲ್ಸ್ ಮಾಡುವಾಗ ಬಡವರ ಹಿತರಕ್ಷಣೆ ಆಗದಂತೆ ಮಾಡಬಾರದು ಎಂದು ಎಲ್ಲರೂ ಹೇಳಿರುವ ವಿಚಾರ. ಬಡವರನ್ನು ರಕ್ಷಣೆ ಮಾಡುವಾಗ ಬಡವರಿಗೆ ಜಮೀನು ಹೋಗಿಲ್ಲ ಅದಕ್ಕೆ ಏನು ಮಾಡುತ್ತಾರೆ. ಒಂದು ಶಂಕೆ ನಮ್ಮ ಮನಸ್ಸಿನಲ್ಲಿ ಇದೆ. ಅದು ಡೆಪ್ಯುಟಿ ಕಮೀಷನರ್ ಮಾಡುವ ಕೆಲಸದಲ್ಲಿ ಇನ್‌ಟರ್‌ಫಿಯರ್ ಆಗುವುದಕ್ಕೆ ಅವಕಾಶ ಇದೆ ಎಂದು ಹೇಳುವುದು ಸರಿ. ಸ್ಟ್ಯಾಂಡರ್ಡ್ ಎಕರೆ ಮತ್ತು ಹೊಸ ಭೂಮಿ ವಿತರಣೆ ವಿಚಾರದಲ್ಲಿ ಹೇಳುತ್ತೇನೆ. ಅದನ್ನು ಅಳತೆ ಕೋಲಾಗಿ ಇಟ್ಟುಕೊಂಡರೆ ಜಮೀನು ಇರುವವರಿಗೆ ಸೇರುತ್ತದೆ. ಲ್ಯಾಂಡ್‌ಲೆಸ್ ಪೀಪಲ್ಸ್‌ಗೆ ಜಮೀನು ಕೊಡುವುದಕ್ಕೆ ಅವಕಾಶ ಇರುವುದಿಲ್ಲ ಎನ್ನುವುದು ಒಂದು ದೊಡ್ಡ ಕೊರತೆ. ಇದಕ್ಕಾಗಿ ಅಲ್ಪಸ್ವಲ್ಪ ಜಮೀನು ಇರುವಾಗ ಸ್ಟ್ಯಾಂಡರ್ಡ್ ಎಕರೆ ಮಟ್ಟದಲ್ಲಿ ಹೋದರೆ ಬಡವರಿಗೆ ಸುತರಾಂ ಜಮೀನು ಸಿಕ್ಕುವುದಿಲ್ಲ. ಲ್ಯಾಂಡ್‌ಲೆಸ್ ಆಗಿದ್ದು ಬೋನಫೈಡ್ ಅಗ್ರಿಕಲ್ಚರಿಸ್ಟ್ ಆಗಿದ್ದರೆ ಆತನಿಗೆ ಭೂಮಿ ಕೊಡಲು ಸರ್ವ ಪ್ರಯತ್ನವನ್ನೂ ಸರಕಾರದವರು ಮಾಡಬೇಕು. Now there is already pressure on land ಆ ಕಾರಣದಿಂದ ಚಿಕ್ಕಪುಟ್ಟ ಸಾಗುವಳಿದಾರರನ್ನು ಆದಷ್ಟು ರಕ್ಷಣೆ ಮಾಡಿ ಅವನ ಕೈಯ್ಯಲ್ಲಿ ಭೂಮಿಯನ್ನು ಕೊಡದೆ ಇದ್ದರೆ ಈಗಲೆ ಬೇಕಾದಷ್ಟು ಎಮ್‌ಪ್ಲಾಯ್‌ಮೆಂಟ್ ಇಲ್ಲದೆ ಇರುವ ಕಾಲದಲ್ಲಿ ಭೂಮಿ ಮೇಲೆ ಜೀವನ ಮಾಡುವವರಿಗೆ ಹೊಟ್ಟೆ ಹೊರೆಯುವುದಕ್ಕೆ ಕೆಲಸವನ್ನು ಒದಗಿಸಬೇಕಾಗುತ್ತದೆ. ಯಾರು ಬೋನಫೈಡ್ ಅಗ್ರಿಕಲ್ಚರಿಸ್ಟ್ ಇದ್ದಾರೆಯೋ—ಹರಿಜನರು ನನ್ನ ಮನಸ್ಸಿನಲ್ಲಿ ಇಲ್ಲ—ಅಂತಹ ಕ್ಯಾಟಗಿರಿಯನ್ನು ಪ್ರೊಟೆಕ್ಟ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಾವು ಏನು ಕಾನೂನು ಮಾಡಿದರೂ ಕೂಡ ಬಡವರ ಮೇಲೆ ಹೆಚ್ಚಿನ ಭಾರ ಬೀಳುವುದು ನಿಜ. ಇದರಲ್ಲಿ Inspite of the good intentions of the Government ಹರಿಜನರಿಗೆ ತುಂಬಾ ಅನ್ಯಾಯವಾಗುತ್ತದೆ. ಈ ಕಾನೂನನ್ನು ಜಾರಿಗೆ ತರುವಾಗ ಆಫೀಸರುಗಳನ್ನು ಹೆಚ್ಚಿಗೆ ನಂಬಿ ಅವರ ಕೈಯ್ಯಲ್ಲಿ ಅಧಿಕಾರ ಕೊಡುತ್ತೀರಿ. ಈ ಅಧಿಕಾರಿಗಳು ಕೂಡ ಬಡವರಿಗೆ ದೊರೆಯುವ ಸಹಾಯ ದೊರಕಿಸಿಕೊಟ್ಟಿಲ್ಲ ಎಂದು ಅತ್ಯಂತ ವ್ಯಸನದಿಂದ ಸರಕಾರಕ್ಕೆ ತಿಳಿಸುತ್ತೇನೆ. ಇತ್ತೀಚೆಗೆ ಐ.ಎ.ಎಸ್. ಆಫೀಸರುಗಳ ಸ್ಕೀಂ ಬಂತು. ಐ.ಸಿ.ಎಸ್. ಸ್ಕೀಂ ಬ್ರಿಟಿಷರ ಕಾಲದಲ್ಲಿ ಇತ್ತು. ಅದಕ್ಕೂ ಇದಕ್ಕೂ ಕ್ವಾಲಿಟೇಟಿವ್ ಡಿಫರೆನ್ಸ್ ಏನು ಕಾಣುತ್ತಾ ಇಲ್ಲ. Letter of the law ಏನು ಇದೆಯೋ ಅದನ್ನು ರಕ್ಷಣೆ ಮಾಡುವುದರಲ್ಲಿ ಅವರು ಹೆಚ್ಚಿಗೆ ನಿರತರು ಆಗಿದ್ದಾರೆಯೇ ವಿನಾ ಆದ್ದರಿಂದ ಹೆಚ್ಚಿಗೆ ಉಪಕಾರ ಬಡವರಿಗೆ ಆಗಿಲ್ಲ. ಬಿಳಿ ಆನೆ ಇದ್ದಹಾಗೆ ಅಡ್‌ಮಿನಿಸ್ಟ್ರೇಷನ್ ಆಗುತ್ತಾ ಇದೆ. It is very Costly to maintain ಅಷ್ಟೇ ವಿನಾ ಅವರಿಂದ ಬಡವರಿಗೆ ಉಪಕಾರ ಆಗುತ್ತಾ ಇಲ್ಲ. ಈ ಕಾಯಿದೆ ವಿಚಾರವಲ್ಲಿ ಅದೇ ಪರಿಣಾಮವಾಗುತ್ತದೆ. ಮಾನ್ಯ ಮಂತ್ರಿಗಳು ರೂಲ್ ಮೇಕಿಂಗ್ ಪವರ್ಸ್ ಸರಕಾರದವರು ಇಟ್ಟುಕೊಂಡಿದ್ದಾರೆ, ಟ್ರಿಬ್ಯೂನಲ್ ಕೊಟ್ಟರೆ ರಕ್ಷಣೆ ಇರುವುದಿಲ್ಲ ಎಂದು ಹೇಳಿದರು. ಆದರೆ ರೈತರ ಕೈಯ್ಯಲ್ಲಿ ದುಡ್ಡು ಇಲ್ಲ. ಅವರು ಅಪೀಲು ಹೋಗುವುದಕ್ಕಾಗುವುದಿಲ್ಲ. ಈ ವಿಚಾರವನ್ನು ಕಡಿದಾಳ್ ಮಂಜಪ್ಪನವರ ಕಾಲದಲ್ಲಿ ಹೇಳಿದೆ. ಎಕ್ಸ್‌ಪೆರಿಮೆಂಟ್ ಮಾಡೋಣ ಬೇಡ ಎಂದು ಹೇಳುವುದಿಲ್ಲ. ಫೈನಲ್ ಅಪೀಲ್ ಸರಕಾರದವರು ಇಟ್ಟುಕೊಂಡಿರುವುದರಿಂದ ಸರಕಾರದ ಹತ್ತಿರ ಬಡವರು ಸುಲಲಿತವಾಗಿ ಬರುತ್ತಾರೆ ಹೆಚ್ಚು ಕರುಣೆಯಿಂದ ಅವರಿಗೆ ರಕ್ಷಣೆ ಕೊಡಬಹುದು ಎಂದು ಹೇಳಿದರು. ಈಗ ಎರಡು ಲಕ್ಷ ಎಕರೆ ಬಗರ್ ಹುಕುಂ ಸಾಗವಳಿಯಲ್ಲಿ ಇದೆ ಎಂದು ಹೇಳಿದ್ದಾರೆ. ಬಡವರು ಒಟ್ಟಿಗೆ ಇಷ್ಟು ಇದ್ದಾರೆ ಎಂದು ತೋರಿಸಿ ಜಮೀನು ಕೊಡುವಾಗ ಯಾರು ಅರ್ಜಿ ಹಾಕಿ ನಿರಾಶೆ ಹೊಂದಿದ್ದಾರೋ ಅವರಿಗೆ ದರಖಾಸ್ತು ರೂಪದಲ್ಲಿ ಜಮೀನು ಕೊಡುವ ಹಾಗೆ ಮಾಡಿದರೆ, ಸರಕಾರದ ಕಣ್ಣು, ನ್ಯಾಯದ ಮೇಲೆ ಬಡವರ ಮೇಲೆ ಇದೆ ಎನ್ನುವುದು ಸಾಬೀತು ಆಗುತ್ತದೆ. ಕಣ್ಣು ಮುಚ್ಚಿಕೊಂಡು ಅವರಿವರಿಗೆ ಕೊಟ್ಟರೆ, ಸ್ಟ್ಯಾಂಡರ್ಡ್ ಎಕರೆ ಪ್ರೊಟೆಕ್ಷನ್ ಕೊಟ್ಟರೆ, ಒಬ್ಬೊಬ್ಬರು 2 0, 300 ಎಕರೆ ಜಮೀನು ಇಟ್ಟುಕೊಳ್ಳಬಹುದು. ಕಬ್ಬಕ್ಕಿಯ ಹಾಗೆ ಬಾಯಿ ಬಿಟ್ಟುಕೊಂಡು ಕುಳಿತಿರುವ ಬಡವರಿಗೆ ಹೇಗೆ ಜಮೀನು ಕೊಡುತ್ತೀರಿ !

(ಶ್ರೀ ಕೆ. ಪ್ರಭಾಕರ್)

ಲ್ಯಾಂಡ್‌ಲೆಸ್ ಪೀಪಲ್ ಜಮೀನಿಗೆ ಅರ್ಜಿ ಹಾಕಿದ್ದು ದನಕರುಗಳು, ಜಾನುವಾರುಗಳಿಗೆ ಗೋಮಾಳ ಕಮ್ಮಿ ಅಂತ ಹೇಳಿ ಅದನ್ನು ಕೊಡಕೂಡದು ಎಂದು ಕ್ಯಾನ್ಸಲ್ ಆಗಿದ್ದ ಅದೇ ಜಮೀನನ್ನು ಪ್ರಭಾವ ಇರತಕ್ಕವರು ಹಂಚಿಕೊಂಡಿದ್ದಾರೆ. ಅದನ್ನು ಅವರಿಗೆ ಕನ್‌ಫರ್ಮ್ ಮಾಡಬಾರದಾಗಿತ್ತು, ಮಾಡಿದ್ದಾರೆ ಈ ವಿಷಯದ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸ ಬೇಕೆಂದು ಹೇಳುತ್ತೇನೆ.

ಇದರಲ್ಲಿರತಕ್ಕ ಲೋಪದೋಷಗಳನ್ನು ನಿವಾರಣೆ ಮಾಡಲು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅದರ ವರದಿಯನ್ನು ಪರಿಶೀಲನೆ ಮಾಡಿ ನಂತರ ಇಂತಹ ಒಂದು ಮಸೂದೆಯನ್ನು ಮಾಡ ಬಹುದಾಗಿತ್ತು ಅದನ್ನೂ ಕೂಡ ಮಾಡಲಿಲ್ಲ, ಕಾರ್ಯ ರೂಪದಲ್ಲಿ ಇದನ್ನು ಜಾರಿಗೆ ತರುವಾಗ ಲ್ಯಾಂಡ್ ಹಂಗರ್ ಯಾರಿಗೆ ಇದೆಯೋ ಅವರು ದೋಚಿಕೊಂಡು ಹೋಗದಂತೆ, ಯಾದ್ವಾತದ್ವಾ ಆಗದಂತೆ, ಕ್ರಾಂತಿಗೆ ಅವಕಾಶ ಕೊಡದಂತೆ ಆಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri H. V. KOUJALGI.—Sri, I have heard patiently all the Hon. Members who have spoken on this amending Bill. Almost all the members have expressed their opinion and are very keen about Section 94. Of course all are unanimous and are anxious to see that the lands encroached upon should go to the poor man. In this respect there is the unanimous opinion of the Members. If a man who has encroached upon the land is a poor man, or a landless person or a Harijan, the encroached land should be given to him and it should be granted to him at the barest minimum price. Some of the Hon. Members expressed that the Officers may not use discretion in fixing up the market value of the land and sometimes they may value the land exorbitantly and in that case the poor man may not be able to take that land. Of course in the amending Bill a minimum price is provided. I am sure that the Officers will use their discretion and fix up the price in favour of the poor man. Directions in this regard can also be issued to the Officers.

Sri M. NAGAPPA.—I want to know whether such directions are binding upon the officers when there are no provisions in the Act.

Sri H. V. KOUJALGI.—I am only speaking as to why amendment to Section 94 is necessary. The anxiety of the members is that the encroached land should be given to the poor man but not to the rich man. Amendment to Section 94 clearly defines all these things and therefore this will have to be accepted. As the law stands, such a concession to a poor man or a landless man is already there. That is why the amendment to this Section 94 is sought. When once the amendment is found necessary in this regard, we shall see what protection is required to be given to safeguard the interests of the poor encroacher. That is why an enabling sub-clause 94A is provided. The encroacher may be evicted at the discretion of the Deputy Commissioner. The Deputy Commissioner may or may not evict him. Most of the members feared whether these powers would be misused and the land would be granted on political considerations to a rich man or to a big land-lord. I assure the House that that is not the object of the Government in bringing this amendment. I also share the view that this amendment is sought to give benefit to the poor man but not the rich man or to a big landlord

When that is the object of the Government, I want to see that is literally fulfilled.

Sri H. SIDDAVEERAPPA.—Are you moving another amendment now? I will be very happy if you do it. Now you were good enough to share our views and we are thankful. If this enabling provision is only to give the land to the landless who have encroached we have no objection. Please make it explicit.

Sri H. V. KOUJALGI.—That is entirely the object and that object will be carried out literally. The question is whether we could bring all these things in a Statute or under Rules. The legal advice is that all these provisions will have to be made in rules, and I assure you that all these rules will be framed by the end of March and I will place them before the House; I will again consult the House and if there is anything which goes against the sentiments expressed by the House, I am prepared to correct them. The object in bringing the Ordinance was to see that these Government lands are distributed as early as possible to the poor people, and in order to achieve that object this amendment is sought through this Ordinance.

Sri H. SIDDAVEERAPPA.—You were pleased to say that you are placing these rules before this House. It is good. After the rules are placed before this House, I would request you to take the views of the House on that point and then finalise the rules.

Sri H. V. KOUJALGI.—As soon as the rules are framed, they will be placed before this House and hon. members are entitled to make suggestions. They will be published in the Gazette and the hon. members will be apprised of the fact; they have an opportunity to make suggestions and after hearing their views we will finalise. So far as *kumki* lands are concerned, I think some provision has been made in the Land Grant Rules.

Hon. member Sri L. Srikantaiah suggested that the local committee can advise the Tahsildar, Assistant Commissioner, Deputy Commissioner or the Divisional Commissioner. As per rules, all these applications are first considered at the level of the Tahsildar. The Committee advises the Tahsildar with regard to the distribution of land. The decision of the Committee has to be carried out by these officers. According to the present rules, the Tahsildar is empowered to grant 5 acres or 2 hectares; if it is beyond his jurisdiction it will go to the Assistant Commissioner, and if it is beyond the jurisdiction of the Assistant Commissioner it will go to the Deputy Commissioner. The advice of the Committe will be taken by the officers.

ಶ್ರೀ ಎಲ್. ಶ್ರೀಕಂಠಯ್ಯ.—ನೂರು ಎಕರೆ ಜಮೀನು ಬೇಕು ಎಂದು ಯಾರಾದರೂ ಅಪ್ಲಿಕೇಷನ್ ಹಾಕುತ್ತಾರೆ. ಸರ್ಕಾರದವರು ಲ್ಯಾಂಡ್ ಗ್ರ್ಯಾಂಟ್ ಕಮಿಟಿಯನ್ನು ಕೇಳಬೇಕೆಂದು ಕಾಯಿದೆಯಲ್ಲಿಲ್ಲ. ಸರ್ಕಾರದವರೇ ನೇರವಾಗಿ ಜಮೀನು ಕೊಡುತ್ತಾರೆ. ಅಂಥ ಸಂದರ್ಭದಲ್ಲಿ ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹತ್ತಾರು ಕೇಸುಗಳಲ್ಲಿ ಗೋಮಾಳವಿರುವ ಜಮೀನನ್ನು ಸರ್ಕಾರ ನೇರವಾಗಿ ಮಂಜೂರು ಮಾಡಿದ್ದ ಸಂದರ್ಭಗಳಲ್ಲಿ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಹಾಕಿದ್ದು, ಸರ್ಕಾರ ಮಂಜೂರು ಮಾಡಿದ್ದವು ವಜಾ ಆಗಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ ? ಗೋಮಾಳ ಪಂಚಾಯಿತಿಯ ಆಸ್ತಿ ಎಂದು ಕೊಟ್ಟಿರುವಾಗ ಅವರನ್ನು ಕೂಡ ಕೇಳದೆ, ಕೆಳಗಿನ ಅಧಿಕಾರಿಗಳನ್ನೂ ಕೇಳದೆ ಸರ್ಕಾರದವರೇ ನೇರವಾಗಿ ಮಂಜೂರು ಮಾಡಿ ತಮ್ಮ ಅಧಿಕಾರ ದುರುಪಯೋಗ ಮಾಡಿದ್ದಾರೆ. ಇಂತಹ ನಿದರ್ಶನಗಳಿರುವುದರಿಂದ ಜನ ಏನು ಭಾವನೆ ಮಾಡಿಕೊಳ್ಳಬೇಕು ?

Sri H. V. KOUJALGI.—So far as the question raised by hon. member Sri Srikantaiah is concerned, I don't think the Government can e xercise such power. The question would arise only when a big area is to be granted for plantations, educational institutions, etc. Under such circumstances, that too, after taking legal advice the Government will exercise powers, but not in each and every case.

With regard to the point raised by Sri Rajaiah Setty, of course, such grants were made and they have been set aside by the High Court, and that is why new rules are made.

ಶ್ರೀ ಎಲ್. ಶ್ರೀಕಂಠಯ್ಯ.—ಯಾವುದೇ ಉದ್ದೇಶಕ್ಕಾಗಲೀ ಹಂಚಲು ಎಷ್ಟು ಭೂಮಿ ಇದೆ ಎಂದು ತಿಳಿದುಕೊಂಡು, ಆ ವಿಚಾರವನ್ನು ಲ್ಯಾಂಡ್ ಗ್ರ್ಯಾಂಟ್ ಕಮಿಟಿಗೆ ರೆಫರ್ ಮಾಡಿ, ಅವರ ಅಭಿಪ್ರಾಯವನ್ನು ಪಡೆದು ಸರ್ಕಾರದವರು, ಅಥವಾ ಡಿವಿಜನಲ್ ಕಮಿಷನರು ಅಥವಾ ಡೆಪ್ಯುಟಿ ಕಮಿಷನರು ಹುಕುಂ ಹೊರಡಿಸುತ್ತಾರೆನ್ನುವ ಭರವಸೆ ಕೊಡುತ್ತಾರೆಯೇ ಸ್ವಾಮಿ ?

Sri H. V. KOUJALGI.—We shall consider it. Hon. member Sri M. Nagappa said that we have fixed the date of 1-7-1968 for political reasons. I have already explained why this date was fixed. I would like to inform the hon. member that each case will be considered on its merit and lands will be granted not on any political consideration.

I think Sri Rajaiah Setty wanted to know the number of encroachers and whether they were landless people. The information about the number is not available, but we have got the extent and nature of land that has been encroached upon. The suggestions will be considered while granting or regularising the land.

There was a suggestion that one stage of appeal ought to have been omitted. In the original Act there is provision for two appeals. The question of revision will come very rarely if it is a question of law. On question of fact, usually there will be no revision. In order to see that justice is done, two appeals are provided.

With these few remarks, I commend that the Bill be passed.

1-00 P.M.

ಶ್ರೀ ಎಂ. ನಾಗಪ್ಪ.—ರೂಲ್ಸ್ ಫ್ರೇಂ ಮಾಡುವ ಕಾಲಕ್ಕೆ ಮಾಡುತ್ತೇವೆ ಎಂದು ತಾವು ಹೇಳುತ್ತೀರಿ. ಆ ಕಾಲಕ್ಕೆ ಲೆಜಿಸ್ಲೇಚರ್ಸ್ ಯಾವ ಕಂಡೀಷನ್ ಹಾಕಿಲ್ಲ ಆದ್ದರಿಂದ ಇಷ್ಟು ಕೊಡಬಹುದು ಎಂದು ತಾವೇ ಹೇಳುತ್ತೀರಿ.

Sri K. PUTTASWAMY.—Sir, the approprehnsi n hon. Member Sri Nagappa is expressing is quite correct and is very well-founded. After taking into consideration the opinion expressed by the hon.

Members of this House a second thought is being given to Section 94A. The amendment that is going to be finally moved in this House, I am sure, will be acceptable to the House.

SRI K. PRABHAKAR.—Sir, what about my suggestion ?

SRI H. V. KOUJALGI.—It is a question of law and it will be examined.

MR. SPEAKER.- Shall we sit up to 2 'O' Clock ?

HON'BLE MEMBERS.—Yes.

MR. SPEAKER. - The time is extended up to 2 P.M.

I shall now put the Statutory Resolution to the vote of the House.

The question is :

"That this Assembly disapproves the Ordinance No. 8 of 1969, namely 'The Mysore Land Revenue (Second Amendment) Ordinance, 1969' promulgated on 23rd day of October 1969 by the Governor of Mysore."

The Resolution was negatived.

MR. SPEAKER. —The question is :

"That the Mysore Land Revenue (Amendment) Bill, 1970, be taken into consideration."

The motion was adopted.

(iii) Motion to refer to a Select Committee

SRI H. N. NANJE GOWDA.—I beg to leave of the House to move :

"That the Mysore Land Revenue (Amendment) Bill, 1970, be referred to a Select Committee consisting of the following members, *viz.*

Sriyuths:—

M. Nagappa
K. H. Ranganath
L. Srikantaiah
H. Siddaveerappa
K. H. Srinivasa
D. M. Siddaiah
S. V. Agnihotri."